ಶ್ರೀ ಎ. ರುಕ್ಮಯ್ಯ ಪೂಜಾರಿ : ಮಾನ್ಯ ಅಧ್ಯಕ್ಷರೇ, ವಿಟ್ಲ ಆರೋಗ್ಯ ಕೇಂದ್ರವನ್ನು ಸಮುದಾಯ ಆಸ್ಪತ್ರೆಯನ್ನಾಗಿ ಮಾಡುವ ಬಗ್ಗೆ ನಾನು ಹಿಂದೆ ಸಹ ಕೇಳಿದ್ದೆ. ಮಾನ್ಯ ಮಂತ್ರಿಗಳಿಗೂ ಸಹ ಅದರ ಮಹತ್ವ ಗೊತ್ತಿದೆ. ಅದನ್ನು ಸಮುದಾಯ ಆಸ್ಪತ್ರೆಯನ್ನಾಗಿ ಮಾಡುವ ಭರವಸೆಯನ್ನು ಸಹ ಕೊಟ್ಟಿದ್ದಾರೆ. ಈ ವರ್ಷವೇ ಅದನ್ನು ಮಾಡಬೇಕೆಂದು ನಾನು ಒತ್ತಾಯಿಸುತ್ತಿದ್ದೇನೆ.

ಶ್ರೀ ಹೆಚ್. ಸಿ ಮಹದೇವಪ್ಪ : ಮಾನ್ಯ ಅಧ್ಯಕ್ಷರೆ, ಬಂಟ್ವಾಳ್ ತಾಲ್ಲೂಕು 1991ನೇ ಜನಗಣತಿಯ ಪ್ರಕಾರ ಜನಸಂಖ್ಯೆ 2 ಲಕ್ಷ 71 ಸಾವಿರ ಇದೆ. ಒಂದು ಲಕ್ಷ ಜನಸಂಖ್ಯೆಗೆ ಒಂದು ಸಮುದಾಯ ಆಸ್ಪತ್ರೆಯನ್ನು ಸ್ಥಾಪನೆ ಮಾಡಬೇಕೆನ್ನುವುದು ಸರ್ಕಾರದ ಮಾರ್ಗ ಸೂಚಿ ಆಗಿದೆ. ಈ ವರ್ಷದ ಜನಸಂಖ್ಯೆಯನ್ನು ಗಣನೆಗೆ ತೆಗೆದುಕೊಂಡರೆ ಅಲ್ಲಿಗೆ ಸಮುದಾಯ ಆಸ್ಪತ್ರೆ ಕೊಡಬೇಕೆನ್ನುವ ಉದ್ದೇಶ ಸರ್ಕಾರಕ್ಕೆ ಇದೆ. ನಾನು ಈ ಹಿಂದೆ ಕೂಡ ವಿಟ್ಲಕ್ಕೆ ಭೇಟಿ ಮಾಡಿದ್ದೆ. ಅಲ್ಲಿಗೆ ಕೊಡಬೇಕೆನ್ನುವ ನಿರ್ಧಾರ ಮಾಡಿದ್ದೇವೆ. ಆ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಎ. ರುಕ್ಮಯ್ಯ ಪೂಜಾರಿ : ಮಾನ್ಯ ಅಧ್ಯಕ್ಷರೇ ಈ ವರ್ಷವೇ ಕೊಡುತ್ತಾರಾ?

ಡಾ|| ಹೆಚ್. ಸಿ. ಮಹದೇವಪ್ಪ : ಹಣಕಾಸಿನ ಪರಿಸ್ಥಿತಿಯನ್ನು ನೋಡಿಕೊಂಡು ಮಾಡುತ್ತೇವೆ.

ಅಧ್ಯಕ್ಷರು : ಮಾನ್ಯ ಸಚಿವರು 335 (2641)ರ ಪ್ರಶ್ನೆಗೆ ಸಮಯ ಕೇಳಿದ್ದಾರೆ ಅನಂತರ ತೆಗೆದುಕೊಳ್ಳೋಣ.

ವಾಣಿಜ್ಯ ಪರೀಕ್ಷೆಯಲ್ಲಿ ರ್‍ಯಾಂಕ್ ಪದ್ಧತಿಯನ್ನು ಕೈ ಬಿಡುವುದು.

336 - ಶ್ರೀ ರಾಮಲಿಂಗಾರೆಡ್ಡಿ (ಜಯನಗರ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ಪ್ರೌಢ ಶಿಕ್ಷಣಮಂಡಳಿ ನಡೆಸುವ ವಾಣಿಜ್ಯ ಪರೀಕ್ಷೆಗಳಲ್ಲಿ ರ್‍ಯಾಂಕ್ ಪದ್ಧತಿಯಿಂದ ಕೆಲವು ವಾಣಿಜ್ಯ ಶಾಲೆಗಳು ರ್‍ಯಾಂಕ್ ಪಡೆಯಲು ಎಲ್ಲಾ ರೀತಿಯ ಅವ್ಯವಹಾರಗಳಲ್ಲಿ ತೊಡಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ;

ಆ) ಪ್ರತಿ ಪರೀಕ್ಷೆಗಳಲ್ಲಿಯೂ ಕೆಲವೇ ವಾಣಿಜ್ಯ ಶಾಲೆಯ ವಿದ್ಯಾರ್ಥಿಗಳು ರ್‍ಯಾಂಕ್ ಪಡೆಯುತ್ತಿರುವುದು ನಿಜವಲ್ಲವೇ;

ಇ) ಎಸ್.ಎಸ್.ಎಲ್.ಸಿ. ಪರೀಕ್ಷೆಗಳಲ್ಲಿ ಮುಂದಿನ ವರ್ಷದಿಂದ ರ್‍ಯಾಂಕ್ ಪದ್ಧತಿಯನ್ನು ರದ್ದುಗೊಳಿಸುವ ರೀತಿಯಲ್ಲಿಯೇ ವಾಣಿಜ್ಯ ಪರೀಕ್ಷೆಗಳಲ್ಲಿನ ರ್‍ಯಾಂಕ್ ಪದ್ಧತಿಯನ್ನು ಸಹ ರದ್ದುಗೊಳಿಸಲು ಸರ್ಕಾರವು ಆಲೋಚಿಸುತ್ತಿದೆಯೇ?

ಶ್ರೀ ಹೆಚ್. ಜಿ. ಗೋವಿಂದೇಗೌಡ (ಪ್ರಾಥಮಿಕ ಹಾಗೂ ಪ್ರೌಢ ಸಿಕ್ಷಣ ಸಚಿವರು) :

ಅ) ಇಲ್ಲ

ಆ) ಬೇರೆ ಬೇರೆ ವಾಣಿಜ್ಯ ವಿದ್ಯಾಸಂಸ್ಥೆಗಳಲ್ಲಿ ರ್‍ಯಾಂಕ್ ಬರುತ್ತವೆ.

ಇ) ಇಲ್ಲ.

ಶ್ರೀ ರಾಮಲಿಂಗಾರೆಡ್ಡಿ : ಮಾನ್ಯ ಅಧ್ಯಕ್ಷರೇ, ಕಾಮರ್ಸ್ ಬೋರ್ಡ್‌ನಲ್ಲಿ ಬೇಕಾದಷ್ಟು ಅವ್ಯವಹಾರಗಳು ಆಗುತ್ತಿವೆ. ಅದರಲ್ಲಿಯೂ ಕೂಡ ಪರ್ಟಿಕ್ಯುಲರ್ ಆಗಿ ರ್‍ಯಾಂಕ್ ತೆಗೆದುಕೊಳ್ಳುವುದಕ್ಕೆ ಬಹಳಷ್ಟು ಮಾಲ್ ಪ್ರಾಕ್ಟೀಸ್ ಆಗುತ್ತದೆ ಎಂದು ನಾನು ಕೇಳಿದ್ದಕ್ಕೆ ಮಾನ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ಇಲ್ಲ ಎಂದು ಹೇಳಿದ್ದಾರೆ. ಮಾನ್ಯ ಅಧ್ಯಕ್ಷರೇ, ಈಗ ನಮ್ಮಲ್ಲಿ ಎಸ್.ಎಸ್.ಎಲ್.ಸಿ ಮತ್ತು ಪಿ.ಯು.ಸಿ ಬೋರ್ಡ್‌ಗಳು ಏನು ಇವೆ ಅದಕ್ಕಿಂತಲೂ ಹೆಚ್ಚಾಗಿ ಅಲ್ಲಿ ಮಾಲ್ ಪ್ರಾಕ್ಟೀಸ್ ಆಗುತ್ತಿದೆ. ಕೆಲವು ಇನ್‌ಸ್ಟಿಟ್ಯೂಟ್‌ಗಳಲ್ಲಿ ಟೈಪಿಂಗ್ ಅನ್ನು ಬೇರೆ ಕಡೆ ಟೈಪ್ ಮಾಡಿಸಿ ತಂದು ಅಲ್ಲಿ ಇನ್‌ಸರ್ಟ್ ಮಾಡುತ್ತಾರೆ. ಇನ್ನು ಕೆಲವರಿಗೆ ಟೈಪಿಂಗ್ ಗೊತ್ತಿರುವುದಿಲ್ಲ, ಶಾರ್ಟ್ ಹ್ಯಾಂಡ್ ಸಹ ಗೊತ್ತಿರುವುದಿಲ್ಲ. ಆದರೂ ಸಹ ಅವರು ಫಸ್ಟ್‌ಕ್ಲಾಸ್‌ನಲ್ಲಿ ಪಾಸಾಗುತ್ತಾರೆ. ಇದರ ಬಗ್ಗೆ ತಾವೂ ಸೂಕ್ತ ಉತ್ತರ ಕೊಡುತ್ತೀರೋ?

ಶ್ರೀ ಹೆಚ್. ಜಿ. ಗೋವಿಂದೇಗೌಡ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) : ಮಾನ್ಯ ಅಧ್ಯಕ್ಷರೇ ಅವರ ಮನಸ್ಸಿನಲ್ಲಿರತಕ್ಕಂಥ ನೋವು ಏನು ಎಂದು ನನಗೆ ಅರ್ಥವಾಗಿದೆ. ಆದರೆ ನಾವು ಕಳೆದ ವರ್ಷದಿಂದ ಈ ವಿಭಾಗದ ಕಾರ್ಯದಕ್ಷತೆಯನ್ನು ಸುಧಾರಿಸಲು ಕಾಮರ್ಸ್ ಬೋರ್ಡ್‌ನ್ನು ಹೊಸದಾಗಿ ಪ್ರಾರಂಭ ಮಾಡಿದ್ದೇವೆ. ಈ ವಿಷಯ ತಮಗೆ ಗೊತ್ತಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ಇದರಲ್ಲಿ ಏನಾದರೂ ಲೋಪದೋಷಗಳು ಆಗುವುದಾದರೆ ವ್ಯವಸ್ಥಿತವಾಗಿ ಕಾರ್ಯಕ್ರಮ ಆಗದೇ ಇದ್ದರೆ ಈ ಬೋರ್ಡ್ ಅದರ ಮೇಲೆ ನಿಗಾ ಇಟ್ಟುಕೊಂಡು ಕೆಲಸ ಮಾಡುವುದಕ್ಕೆ ಬಹಳ ಅನುಕೂಲವಾಗುತ್ತದೆ. ಮಾನ್ಯ ಸದಸ್ಯರು ಈ ರೀತಿಯಿಂದ ಯಾವುದಾದರೂ ವ್ಯವಸ್ಥೆಗಳು ಇದ್ದರೆ ಆ ಬಗ್ಗೆ ನಾನು ಕೂಡಲೇ ಕ್ರಮ ತೆಗೆದುಕೊಳ್ಳುತ್ತೇನೆ.

ಮಾಗಡಿ ಪಟ್ಟಣಕ್ಕೆ ಗ್ರಂಥಾಲಯ.

337 - ಶ್ರೀ ಹೆಚ್. ಸಿ. ಬಾಲಕೃಷ್ಣ (ಮಾಗಡಿ) : ಮಾನ್ಯ ವಯಸ್ಕರ ಶಿಕ್ಷಣ ಮತ್ತು ಗ್ರಂಥಾಲಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಾಗಡಿ ಟೌನ್‌ನಲ್ಲಿ ಉತ್ತಮವಾದ ಸಾರ್ವಜನಿಕ ಗ್ರಂಥಾಲಯ, ಗ್ರಂಥಾಲಯ ಕಟ್ಟಡ, ಗ್ರಂಥಪಾಲಕ ಇಲ್ಲದಿದ್ದುದರಿಂದ ಸಾರ್ವಜನಿಕರಿಗೆ ತೊಂದರೆ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಉತ್ತಮ ಗ್ರಂಥಾಲಯ ನಿರ್ಮಿಸಲು, ಗ್ರಂಥಾಲಯ ಕಟ್ಟಡ ಒದಗಿಸಲು, ಗ್ರಂಥಪಾಲಕರನ್ನು ನೇಮಿಸಲು ಸರ್ಕಾರದವರ ಕ್ರಮ ಏನು?